5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಶಿವಮೊಗ್ಗ
(ಪೀಠಾಸೀನ, ಸಾಗರ)

ಎಸ್.ಸಿ. ಸಂ:10038/2021

ಪಿಡಬ್ಲೂ- 09
ಸಿಡಬ್ಲೂ- 13

| | | |
|---|---|---|
| ಸಾಕ್ಷಿ ಹೆಸರು | - | ಡಾಃ ನಾರಾಯಣ ಪಂಜಿ |
| ತಂದೆ ಹೆಸರು | - | ಟಾನಪ್ಪ |
| ವಯಸ್ಸು | - | 54 ವರ್ಷ |
| ಉದ್ಯೋಗ | - | ನರ ರೋಗ ತಜ್ಞರು , ಮ್ಯಾಕ್ಸ್ ಆಸ್ಪತ್ರೆ ಶಿವಮೊಗ್ಗ |
| ವಿಳಾಸಃ | - | ಶಿವಮೊಗ್ಗ |

ಪ್ರಮಾಣ ವಚನ ಭೋದಿಸಿದ ದಿನಾಂಕಃ 19-10-2023.

ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ

ನಾನು ಏಪ್ರಿಲ್ 2016 ಮ್ಯಾಕ್ಸ್ ಆಸ್ಪತ್ರೆ , ಶಿವಮೊಗ್ಗ ದಲ್ಲಿ ನರರೋಗ ತಜ್ಞನಾಗಿ ಕೆಲಸ ಮಾಡುತ್ತಿದ್ದೇನೆ.

ದಿನಾಂಕಃ 10-16-2019 ರಂದು ಪ್ರಾ ಸಾ -1 ರವರು ಬೆಳಿಗ್ಗೆ 10 ಗಂಟೆ ಸುಮಾರಿಗೆ ದಾಖಲಾಗಿದ್ದು ಮ್ಯಾಕ್ಸ್ ಆಸ್ಪತ್ರೆಯ ತುರ್ತು ಚಿಕಿತ್ಸಾ ವಿಭಾಗದಲ್ಲಿ ರಾತ್ರಿ 2-47 ಗಂಟೆ ಸಮಯಕ್ಕೆ ತಪಾಸಣೆ ಮಾಡಲಾಗಿ ಪ್ರಾ ಸಾ -1 ರವರಿಗೆ ಪ್ರಜ್ಞೆ ಇದ್ದು, ತಲೆ ಬುರುಡೆಯ ಎಡಭಾಗದಲ್ಲಿ ಹಾಗೂ ಹಣೆಯ ಮೇಲೆ ತರಚಿದ ಗಾಯಗಳು ಇದ್ದು ಸ್ಕ್ಯಾನಿಂಗ್ ಮಾಡಲಾಗಿ ಅದರಲ್ಲಿ ಯಾವುದೇ ತರಹದ ಒಳಭಾಗದಲ್ಲಿ ಗಾಯಗಳು ಇಲ್ಲದ್ದು ಕಂಡುಬಂದಿದ್ದು ಸದರಿ ವ್ಯಕ್ತಿಗೆ ಆದಂತಹ ಗಾಯಗಳು ಸಾಮಾನ್ಯ ಸ್ವರೂಪದ ಗಾಯಗಳಾಗಿದ್ದು ಈ ಬಗ್ಗೆ ನಾನು ಗಾಯದ ಪ್ರಮಾಣಪತ್ರ ನೀಡಿದ್ದು ಅದನ್ನು ನಿಪಿ 9 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ -9(ಎ) ಎಂದು ಗುರುತಿಸಲಾಯಿತು. ಪ್ರಾ ಸಾ1 ರವರು ಹಲ್ಲೆಯ ಹಿನ್ನೆಲೆಯಲ್ಲಿ ನಮ್ಮ ಆಸ್ಪತ್ರೆಯಲ್ಲಿ ದಾಖಲಾಗಿದ್ದರು.

ಪ್ರಾ ಸಾ-1 ರವರಿಗೆ ಹಣೆಯ ಎಡಭಾಗದಲ್ಲಿ ಆದಂತಹ ಗಾಯ ಮು ಮಾ -1 ರಿಂದ ಹೊಡೆದಾಗ ನಿಪಿ -9 ರಲ್ಲಿ ಹೇಳಿದಂತಹ ಗಾಯಗಳು ಆಗುವಂತಹ ಸಾಧ್ಯತೆ ಇರುವುದಿಲ್ಲ. ಮು ಮಾ -3 ರಿಂದ ಹಲ್ಲೆ ಮಾಡಿದಾಗ ನಿಪಿ 9 ರಲ್ಲಿ ಹೇಳಿದಂತಹ ಗಾಯಗಳು ಆಗುವ ಸಾಧ್ಯತೆ ಇದೆ.

ಪ್ರಾ ಸಾ -1 ರವರಿಗೆ ಸಂಬಂಧಪಟ್ಟ ಕ್ಯಾಸುಯಾಲಿಟಿ ಪೇಪರ್ ಗಳನ್ನು ಈ ದಿನ ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು ಅದನ್ನು ನಿಪಿ 10 ಎಂದು ಗುರುತಿಸಲಾಯಿತು.

ನಿಪಿ -10 ರಲ್ಲಿ ಕಾಣಿಸಿದಂತಹ ನೋವು ಮು ಮಾ -3 ರಿಂದ ಹಲ್ಲೆ ಮಾಡಿದಾಗ ಆಗುವಂತಹ ಸಾಧ್ಯತೆ ಇದೆ ಎಂದರೆ ಹೌದು.

<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ</u>

ಹಿನ್ನೆಲೆ ಬಗ್ಗೆ ಗಾಯಾಳು ಹೇಳಿದ್ದನ್ನು ನಾನು ಬರೆದುಕೊಂಡಿರುತ್ತೇನೆ ಎಂದರೆ ಹೌದು. ಯಾವುದೇ ವಾಹನದ ಭಾಗವು ತಲೆಗೆ ತಾಗಿದರೆ ನಿಪಿ -10 ರಲ್ಲಿ ಹೇಳಿದಂತಹ ನೋವು ಆಗುವ ಸಾಧ್ಯತೆ ಕಂಡುಬರುತ್ತದೆ ಎಂದರೆ ಹೌದು. ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳಾಗಿ ನಿಪಿ -9 ನ್ನು ಪ್ರಾ ಸಾ -1 ರವರಿಗೆ ನೀಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಪ್ರಕಾರ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಣಗೊಳಿಸಲಾಯಿತು)

ಓ ಹೇ ಕೇ ಸ ಇದೆ

5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಶಿವಮೊಗ್ಗ (ಪೀಠಾಸೀನ, ಸಾಗರ).